# ವರ್ಧಮಾನದ ವರಾತ

'ವರ್ಧಮಾನದ ವರಾತ' ಎಂಬುದು ಕವಿ ಗೋಪಾಲ ಕೃಷ್ಣ ಅಡಿಗರು ಟಂಕಿಸಿದ ಒಂದು ಪದಗುಚ್ಛ. 'ವರಾತ' ಎಂಬುದರ ಅರ್ಥ 'ಒತ್ತಾಯ'ವೆಂದಷ್ಟೆ? ಮನುಷ್ಯ ಹಂತ ಹಂತವಾಗಿ ಶೈಶವ ಸ್ಥಿತಿಯಿಂದ ದೈಹಿಕವಾಗಿ, ಮಾನಸಿಕವಾಗಿ ಬೆಳೆಯುತ್ತಾ ಬಂದಂತೆಲ್ಲಾ– ಒಂದು ಬಗೆಯ ವರಾತ ಮನೋಧರ್ಮವೂ ಅವನಲ್ಲಿ ಬೆಳೆಯುತ್ತಿರುತ್ತದೆ. ಚಿಕ್ಕ ಮಗು ತನ್ನ ತಾಯಿಯ ಗಮನವನ್ನು ತನ್ನತ್ತ ಸೆಳೆಯಲು ತನ್ನ ಮಿತಿಯಲ್ಲಿಯೇ ಏನೆಲ್ಲ ಸಾಹಸ ಮಾಡುವುದೆಂಬುದನ್ನು ನಾವೆಲ್ಲ ನೋಡುತ್ತಿರುತ್ತೇವೆ. ವ್ಯಕ್ತಿ ಬೆಳೆಯುತ್ತಾ ಬಂದಂತೆ ಇನ್ನೊಬ್ಬರ ಗಮನವನ್ನು ಸೆಳೆಯಬೇಕೆಂಬ ಆತನ ಆಕಾಂಕ್ಷೆ ಹತ್ತು ಹಲವು ರೂಪಗಳಲ್ಲಿ ಪ್ರಕಟವಾಗುತ್ತದೆ. ಇದರಲ್ಲಿ ಅಸಹಜವಾದುದೇನೂ ಇಲ್ಲ. ಇಂಥ ತುಡಿತದಿಂದಾಗಿಯೇ ಮನುಷ್ಯನ ವ್ಯಕ್ತಿತ್ವಕ್ಕೆ ಒಂದು ಸ್ಪಷ್ಟರೂಪ ಕಾಣಿಸಿಕೊಂಡು ಸ್ವಂತಿಕೆ ರೂಪುಗೊಳ್ಳುತ್ತದೆ. ಹೀಗೆ ದೈಹಿಕ, ಮಾನಸಿಕ ಪರಾವಲಂಬನೆಯಿಂದ ಬಿಡುಗಡೆ ಪಡೆದು ಸ್ವತಂತ್ರನಾಗುವ, 'ತನ್ನ ತನ'ವನ್ನು ರೂಪಿಸಿಕೊಂಡು, ಅದನ್ನು ಸುತ್ತಲಿನ ಜಗತ್ತಿನ ಮೇಲೆ ಸ್ಥಾಪಿಸಬೇಕೆನ್ನುವ ಒತ್ತಡವನ್ನೇ ಸ್ಥೂಲವಾಗಿ 'ವರ್ಧಮಾನದ ವರಾತ' ಎನ್ನಬಹುದು.

ಮನುಷ್ಯನಲ್ಲಿ ಇಂಥದೊಂದು ಸ್ಥಿತಿ ಅತ್ಯಂತ ಸ್ಪಷ್ಟವಾಗಿ ಪ್ರಕಟವಾಗುವ ಅವಧಿಯೆಂದರೆ ಆತನ ಹದಿಹರೆಯದ ಕಾಲಘಟ್ಟ. ಈ ಘಟ್ಟವನ್ನೇ ಇಂಗ್ಲಿಷ್‌ನಲ್ಲಿ 'ಅಡೋಲೋ ಸೆನ್ಸ್' ಎನ್ನುವುದು. ಹದಿವಯಸ್ಸು ಬಂದಾಗ ಹುಡುಗ ಹುಡುಗಿಯರಲ್ಲಿ ತೀವ್ರವಾದ ದೈಹಿಕ ಹಾಗೂ ಮಾನಸಿಕ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಶೈಶವದ ಮುಗ್ಧತೆ ಮಾಯವಾಗಿ, ಒಂದು ಬಗೆಯ ಬಂಡಾಯ ಪ್ರವೃತ್ತಿ ಮಿಸುಕಾಡತೊಡಗುತ್ತದೆ; ವಿನಯ, ವಿಧೇಯತೆಗಳ ಜಾಗದಲ್ಲಿ ಪ್ರತಿಭಟನಾ ಮನೋಧರ್ಮ ವ್ಯಕ್ತವಾಗತೊಡಗುತ್ತದೆ. ಹಿರಿಯರ ಮಾತುಗಳನ್ನು ತಿರಸ್ಕರಿಸುವ, ಶ್ರದ್ಧೆ ಸಂಪ್ರದಾಯಗಳನ್ನು ಪ್ರಶ್ನಿಸುವ, ವ್ಯವಸ್ಥೆಯ ವಿರುದ್ಧ ಬಂಡೇಳುವ, ತನಗೆ ಸರಿಯೆನ್ನಿಸಿದುದನ್ನು ಮಾಡಿಯೇ ಮಾಡುತ್ತೇನೆನ್ನುವ ಹದಿ ವಯಸ್ಸಿನ ಹುಡುಗ ಹುಡುಗಿಯರು ಹಿರಿಯರ ಪಾಲಿಗೆ ಚಿಂತೆ ಆತಂಕಗಳನ್ನುಂಟು ಮಾಡುವುದರಲ್ಲಿ ಆಶ್ಚರ್ಯವಿಲ್ಲ. ಮಿಡಿಮಾವು ಬಲಿಯುತ್ತಾ ಬಂದಂತೆಲ್ಲಾ ಅದರಲ್ಲಿನ ಹುಳಿಯ ಅಂಶ ಗರಿಷ್ಠ ಸ್ಥಿತಿಯನ್ನು ಮುಟ್ಟುವಂತೆ, ಶೈಶವದಿಂದ ಹದಿಹರೆಯಕ್ಕೆ ಬಂದ ವ್ಯಕ್ತಿಗಳಲ್ಲಿ ವರ್ಧಮಾನದ ವರಾತದ ಪರಿಣಾಮವಾದ 'ಅಹಂ' (Ego) ಪರ್ಯಾಪ್ತಹಂತಕ್ಕೆ ತಲುಪುತ್ತದೆ ಎನ್ನಬಹುದು. ಹದಿಹರೆಯದ ಮನಸ್ಸು ಒಂದು ಹುಚ್ಚು ಕುದುರೆಯಂತೆ. ಅಲ್ಲಿ ವಿವೇಕದ ಕಡಿವಾಣವಿರುವುದಿಲ್ಲ; ಜೀವನಾನುಭವದ ಮಾರ್ಗಸೂಚಿ ಇರುವುದಿಲ್ಲ; ತನ್ನ ಶಕ್ತಿಯನ್ನು ಅಪವ್ಯಯ ಮಾಡಬಾರದೆನ್ನುವ ವಿವೇಚನೆಯೂ ಇರುವುದಿಲ್ಲ. (ವರ್ಧಮಾನದ ವರಾತ ಹುಟ್ಟು ಹಾಕುವ ಇಂಥ ಸ್ಥಿತಿಯನ್ನು ಅಡಿಗರು 'ಬಿದ್ದು, ಮೊಣಕಾಲೂರಿ ತರಿದ ಮೈಕೈ, ಜಜ್ಜಿದ ಚಹರೆ...' ಇತ್ಯಾದಿ ಮಾತುಗಳಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ).

ಇಷ್ಟಾದರೂ ಇದೊಂದು ಅನಿವಾರ್ಯವಾದ ಹಾಗೂ ಅವಶ್ಯವಾದ ಒಂದು ಸ್ಥಿತಿ. ಜೀವನಾನುಭವಗಳಿಂದ ವ್ಯಕ್ತಿಯ ಮನಸ್ಸು ಪಕ್ವಗೊಳ್ಳಬೇಕಾದರೆ ಈ ಹಂತದ ಮೂಲಕ ಹಾದು ಹೋಗಲೇಬೇಕು. ಮೊಸರಿನಲ್ಲಿ ಅಂತರ್ಗತವಾಗಿರುವ ಬೆಣ್ಣೆಯನ್ನು ಹೊರತೆಗೆಯಲು ಮೊಸರನ್ನು ಕಡೆಯಬೇಕಾಗುತ್ತದೆಯಷ್ಟೆ? ಹಾಗೇ ಹದಿಹರೆಯದ ಅವಿಚಾರಿತ ದುಡುಕು, ದುಮ್ಮಾನ, ಆಕ್ರೋಶಗಳು ವ್ಯಕ್ತಿ ಜೀವನದಲ್ಲಿ ಘಟಿಸುವ ಒಂದು ಮಂಥನ ಕ್ರಿಯೆ, ಮನುಷ್ಯನಲ್ಲಿರುವ ಬಂಡಾಯ ಪ್ರವೃತ್ತಿಯೇ ಅವನನ್ನು ಸ್ವಸ್ವರೂಪದ ಎದುರು ಕರೆದೊಯ್ಯುತ್ತದೆ ಎಂಬುದು ಸುಳ್ಳಲ್ಲ. ಆತನಲ್ಲಿದ್ದ ಅಕಾರಣ ಆಕ್ರೋಶವೇ ನಿಧಾನವಾಗಿ ಆತನನ್ನು ಆತ್ಮನಿರೀಕ್ಷೆಗೆ ಪ್ರೇರಿಸುತ್ತದೆ. ಅನುಭವಗಳ ಕತ್ತಲ ಗಹ್ವರಗಳಲ್ಲಿ ಮುಗ್ಗರಿಸುತ್ತಾ, ತಡವರಿಸುತ್ತಾ ನಡೆದು ಅಂತಿಮವಾಗಿ ನಿಜದ ಬೆಳಕನ್ನೂ, ಯುಕ್ತಾಯುಕ್ತ ವಿವೇಕವನ್ನೂ ಎಟುಕಿಸಿಕೊಳ್ಳಬೇಕಾದರೆ ನಾವೆಲ್ಲರೂ ವರ್ಧಮಾನದ ವರಾತಕ್ಕೆ ಒಳಗಾಗಲೇ ಬೇಕು. ಬಾಳಿನ ಏರಿಳಿತಗಳ ಕಠಿಣ ದಾರಿಯಲ್ಲಿ ನಡೆದು, ವ್ಯಕ್ತಿತ್ವ ಹುಳಿ ಕಳೆದುಕೊಂಡ ರಸಭರಿತ ಹಣ್ಣಿನಂತೆ ಮಾಗಿದಾಗಲೇ ಬದುಕಿನ ವಿಕಾಸ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ!

■ ವೈನತೇಯ

## ಮಾತೇ ಮುತ್ತು

★ ನಿಮ್ಮ ಗುರಿ ಸೇವೆಯಾಗಿರಲಿ, ಅದನ್ನು ಗೆಲುವಿಗಾಗಿ ಮಾಡಬೇಡಿ. ಗೆಲುವು ತನ್ನಷ್ಟಕ್ಕೆ ನಿಮ್ಮನ್ನು ಹುಡುಕಿಕೊಂಡು ಬರುತ್ತದೆ.

-ವಿನೋಬಾ ಭಾವೆ

★ ಅಸಂತುಷ್ಟ ಮನುಷ್ಯ ಯಾವುದರಿಂದಲೂ ತೃಪ್ತನಾಗಲಾರ. ಅವನ ದೃಷ್ಟಿಯಲ್ಲಿ ಎಲ್ಲಾ ಕೆಲಸವೂ ನೀರಸ. ಆದ್ದರಿಂದ ಅವನ ಜೀವನದಲ್ಲಿ ಸಫಲತೆ ಸಿಕ್ಕಲಾರದು.

-ಸ್ವಾಮಿ ವಿವೇಕಾನಂದ

★ ತನ್ನ ಮೂರ್ಖತನದ ಅರಿವಿಲ್ಲದವನು ದೊಡ್ಡ ಮೂರ್ಖ, ಅರಿತಿರುವವನು ಅತಿ ಬುದ್ಧಿವಂತ.

-ಸಾಕ್ರೆಟಿಸ್

★ ತನ್ನ ಆತ್ಮವನ್ನು ಗೆಲ್ಲದೆ ಇಡೀ ವಿಶ್ವವನ್ನು ಗೆಲ್ಲುತ್ತೇನೆ ಎನ್ನುವವನಿಂದ ಏನು ಲಾಭವಿದೆ?

-ಬೈಬಲ್

★ ಉಪಕಾರ ಮಾಡುವ ಶತ್ರುವಿನ ಜತೆ ಸಂಬಂಧ ಬೆಳೆಸುವುದು ತಪ್ಪಲ್ಲ. ಅಪಕಾರಿ ಮಿತ್ರನಿಂದ ದೂರ ಇರಬೇಕು. ಉಪಕಾರ ಮಾಡಿದವನು ಮಿತ್ರ, ಅಪಕಾರ ಮಾಡುವವನು ಶತ್ರು.

-ಮಾಘ

★ ಬೇರೆಯವರೊಡನೆ ವ್ಯವಹರಿಸುವ ಮೊದಲು ನಿನಗೆ ಆ ವ್ಯವಹಾರ ಸರಿ ಕಂಡಿತೇ ಎಂಬುದನ್ನು ಖಾತರಿಪಡಿಸಿಕೊಳ್ಳುವುದು ಕ್ಷೇಮಕರ.

-ಬರ್ಟ್ರಾಂಡ್ ರಸೆಲ್

★ ಬೇರೆಯವರು ನೀಡುವ ಉಪದೇಶಗಳನ್ನು ಮನಸ್ಸಿಟ್ಟು ಕೇಳು. ಆದರೆ ನೀನು ನೀಡುವ ಉಪದೇಶವನ್ನು ಆಯ್ದ ಜನರಿಗೆ ಹೇಳು.

-ಶೇಕ್ಸ್‌ಪಿಯರ್

★ ಜೀವನದಲ್ಲಿ ಏನನ್ನಾದರೂ ಹೊಸತು ಹುಡುಕಲು ಯಾವುದೇ ವ್ಯಕ್ತಿ ಭರವಸೆಯಿಂದ ಇದ್ದರೆ, ಎಂದಾದರೊಂದು ದಿನ ಅವನು ಅದನ್ನು ಸಾಧಿಸಬಲ್ಲ.

-ಮೆರೆಡಿತ್

★ ನಮ್ಮ ಅವಗುಣಗಳನ್ನು ಹುಡುಕಿ ಸರಿಪಡಿಸಿಕೊಂಡರೆ ತಲೆಯೆತ್ತಿ ನಡೆದು ಉನ್ನತ ಸ್ಥಾನಮಾನಗಳಿಸಲು ಸಾಧ್ಯ. ತಾನು ಅತ್ಯುತ್ತಮ ಎಂದು ಜಂಬ ಪಡುವುದರಲ್ಲಿ ಅರ್ಥವಿಲ್ಲ.

-ಆನಂದಕಂದ (ಬೆಟಗೇರಿ ಕೃಷ್ಣಶರ್ಮ)

★ ಬೇರೆಯವರು ನಿನ್ನ ಬಗ್ಗೆ ಮಾತಾಡದೇ ಇದ್ದಾಗ ನೀನು ಅವರ ಬಗ್ಗೆ ಮಾತನಾಡುವುದು ಸರಿಯಲ್ಲ.

-ಅಬ್ರಹಾಂ ಲಿಂಕನ್

★ ನೀನು ಒಳ್ಳೆಯವನಾಗಿದ್ದರೆ ಬೇರೆಯವರ ಹಿತವನ್ನು ಬಯಸುತ್ತೀಯೆ.

-ಶಂ.ಬಾ.ಜೋಶಿ

★ ಗೋಧನ, ಕುದುರೆ ಧನ, ಆನೆ ಧನ, ಸಂಪತ್ತು– ಇದೆಲ್ಲವೂ 'ಸಂತೋಷ' ಎಂಬ ಧನದ ಮುಂದೆ ಧೂಳಿಗೆ ಸಮಾನ.

-ಕಬೀರ

★ ಬೇರೆಯವರ ಯಶಸ್ಸನ್ನು ನಾಶಗೊಳಿಸಿ ಆತ್ಮ ಯಶಸ್ಸನ್ನು ಬಯಸುವವನ ಕಳಂಕ ಅಳಿಸಲಾಗದಂಥದು.

-ತುಲಸಿದಾಸ

★ ಪ್ರಾಪಂಚಿಕ ವಸ್ತುಗಳಲ್ಲಿ ಸುಖವನ್ನು ಹುಡುಕುವುದು ವ್ಯರ್ಥ. ಆನಂದದ ತಿಜೋರಿ ನಿನ್ನೊಳಗೇ ಇದೆ.

-ಸ್ವಾಮಿ ರಾಮತೀರ್ಥರು